# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:21-01-2025 ರಂದು ಮಂಗಳವಾರ ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ ಇಲ್ಲಿ ನಡೆದ "ವಿದ್ಯಾವಿಷಯಕ ಪರಿಷತ್‌ನ ಅಸಾಮಾನ್ಯ (ಘಟಿಕೋತ್ಸವ) ಸಭೆ"ಯ ನಡಾವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್ ಕೆ.ಎ.ಎಸ್.. ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಗೋಪಿನಾಥ್ ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಕೇಶವ ಹೆಚ್, ಜಂಟಿ ನಿರ್ದೇಶಕರು | ಸದಸ್ಯರು |
| 5. | ಡಾ. ಸಂಧ್ಯಾ ಕಾವೇರಿ, ಪ್ರಾಂಶುಪಾಲರು | ಸದಸ್ಯರು |
| 6. | ಶ್ರೀ ಉಲ್ಲಾಸ್ ಇ.ಜಿ, ಪ್ರಾಂಶುಪಾಲರು | ಸದಸ್ಯರು |
| 7. | ಡಾ. ಚಿದಾನಂದ ಎನ್.ಕೆ, ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಎಂ. ವೆಂಕಟೇಶ್, ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಪ್ರಭಾಕರ್ ಎಸ್. ಮಂಟೂರೆ, ಪ್ರಾಂಶುಪಾಲರು | ಸದಸ್ಯರು |
| 10. | ಡಾ.ಬಿ.ಜಿ. ಚನ್ನಪ್ಪ, ಪ್ರಾಂಶುಪಾಲರು | ಸದಸ್ಯರು |
| 11. | ಶ್ರೀ ರಾಜಣ್ಣ ಕೆ. ಪ್ರಾಂಶುಪಾಲರು | ಸದಸ್ಯರು |
| 12. | ಡಾ. ರಾಕೇಶ್ ಎಸ್.ಪಿ, ಪ್ರಾಂಶುಪಾಲರು | ಸದಸ್ಯರು |
| 13. | ಡಾ. ಶಿವಕುಮಾರ್ ಜಿ.ಎಸ್, ಪ್ರಾಂಶುಪಾಲರು | ಸದಸ್ಯರು |
| 14. | ಡಾ. ಜಿ.ಎಂ. ಗಣೇಶ್, ಪ್ರಾಂಶುಪಾಲರು | ಸದಸ್ಯರು |
| 15. | ಡಾ. ನಾಗರಾಜ, ಪ್ರಾಧ್ಯಾಪಕರು | ಸದಸ್ಯರು |
| 16. | ಡಾ. ರಾಜೇಶ್ವರ್ ಎ.ಎನ್, ಪ್ರಾಧ್ಯಾಪಕರು | ಸದಸ್ಯರು |
| 17. | ಡಾ. ಸರ್ವಮಂಗಳ ಜಿ, ಪ್ರಾಧ್ಯಾಪಕರು | ಸದಸ್ಯರು |
| 18. | ಡಾ. ಪಾಟೀಲ್ ಸಂಗನಗೌಡ ಎಸ್., ಪ್ರಾಧ್ಯಾಪಕರು | ಸದಸ್ಯರು |
| 19. | ಡಾ. ಜಿ. ಪ್ರಶಾಂತ ನಾಯಕ, ಪ್ರಾಧ್ಯಾಪಕರು. | ಸದಸ್ಯರು |
| 20. | ಡಾ. ಎಸ್.ವಿ. ಕೃಷ್ಣಮೂರ್ತಿ, ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 21. | ಡಾ. ಜಗನ್ನಾಥ ಕೆ. ಡಾಂಗೆ, ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 22. | ಡಾ. ಗುರುಲಿಂಗಯ್ಯ ಎಂ, ಡೀನರು, ಕಲಾ ನಿಕಾಯ | ಸದಸ್ಯರು |
| 23. | ಡಾ. ಆರ್. ಹಿರೇಮಣಿನಾಯ್ಕ್, ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 24. | ಡಾ. ಆರ್.ಹೆಚ್. ವಾಲ್ಮೀಕಿ, ಗ್ರಂಥಪಾಲಕರು, (ಪ್ರಭಾರ) | ಸದಸ್ಯರು |
| 25. | ಡಾ. ಜಿ. ಪ್ರಶಾಂತ ನಾಯಕ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು | ಸದಸ್ಯರು |
| 26. | ಡಾ. ಆರ್ತೋಬನಾಯಕ ವೈ, ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು | ಸದಸ್ಯರು |
| 27. | ಡಾ. ನಾಗರಾಜ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, | ಸದಸ್ಯರು |
| 28. | ಡಾ. ಎನ್.ಡಿ. ವಿರೂಪಾಕ್ಷ, ನಿರ್ದೇಶಕರು ದೈಹಿಕ ಶಿಕ್ಷಣ | ಸದಸ್ಯರು |

ಗೈರುಹಾಜರಾದ ಸದಸ್ಯರು:

| | | |
|---|---|---|
| 1. | ಶ್ರೀ ಹೆಚ್.ಡಿ. ತಮ್ಮಯ್ಯ, ಶಾಸಕರು, ಚಿಕ್ಕಮಗಳೂರು ಕ್ಷೇತ್ರ | ಸದಸ್ಯರು |
| 2. | ಶ್ರೀ ಬಿ.ಕೆ. ಸಂಗಮೇಶ್ವರ, ಶಾಸಕರು, ಭದ್ರಾವತಿ | ಸದಸ್ಯರು |
| 3. | ಶ್ರೀ ಡಿ.ಎಸ್. ಅರುಣ್, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 4. | ಶ್ರೀ ಸೂರಜ್ ರೇವಣ್ಣ, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

5. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. ಸದಸ್ಯರು
6. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. ಸದಸ್ಯರು
7. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. ಸದಸ್ಯರು
8. ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. ಸದಸ್ಯರು

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

ಪ್ರಸ್ತಾವನೆ: ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ವಿದ್ಯಾವಿಷಯಕ ಪರಿಷತ್‌ಗೆ ನೂತನವಾಗಿ ನಾಮನಿರ್ದೇಶನಗೊಂಡ ಪ್ರಾಂಶುಪಾಲರುಗಳಾದ ಡಾ. ಸಂಧ್ಯಾ ಕಾವೇರಿ, ಶ್ರೀ ಉಲ್ಲಾಸ್ ಇ.ಜಿ., ಡಾ. ಚಿದಾನಂದ ಎನ್.ಕೆ., ಡಾ. ಎಂ. ವೆಂಕಟೇಶ್, ಡಾ. ಪ್ರಭಾಕರ್ ಎಸ್. ಮಂಟೂರೆ., ಡಾ.ಬಿ.ಜಿ. ಚನ್ನಪ್ಪ, ಡಾ. ರಾಕೇಶ್ ಎಸ್.ಪಿ., ಡಾ. ಜಿ.ಎಂ. ಗಣೇಶ್, ಶ್ರೀ ರಾಜಣ್ಣ ಕೆ., ಡಾ. ಶಿವಕುಮಾರ್ ಜಿ.ಎಸ್., ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಡಾ. ಕೇಶವ ಹೆಚ್., ಇವರುಗಳನ್ನು ಸನ್ಮಾನಿಸಲಾಯಿತು. ವಿದ್ಯಾವಿಷಯಕ ಪರಿಷತ್ ಸದಸ್ಯತ್ವದ ಅವಧಿ ಮುಗಿದ ಪ್ರಾಂಶುಪಾಲರುಗಳಾದ ಡಾ. ಲಕ್ಷ್ಮೀಶ ಎ.ಎಸ್., ಶ್ರೀ ತ್ರಿಪುರ ಮಹೇಶ್ವರ ಎಂ., ಡಾ. ಉಮೇಶ್ ಕೆ., ಡಾ. ಮುಷ್ತಾಕ್ ಅಹಮದ್, ಡಾ. ಮಧು ಜಿ., ಶ್ರೀ ವಿನ್‌ಸೆಂಟ್ ಕಾರ್ಡೋಜ, ಡಾ. ಸಣ್ಣಹನುಮಪ್ಪ ಜಿ., ಡಾ. ಅನಂತ ಎಸ್, ಡಾ. ಪರಮೇಶ ಮಸಲವಾಡ ಹಾಗೂ ಡಾ.ಶೇಖರ್ ಮತ್ತು ವಯೋ ನಿವೃತ್ತಿ ಹೊಂದಿದ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾಗಿದ್ದ ಡಾ. ವಿಷ್ಣುಮೂರ್ತಿ ಇವರ ಸೇವೆಯನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸಲಾಯಿತು. ಮಾನ್ಯ ಕುಲಪತಿಯವರು ವೈಯಕ್ತಿಕ ಕಾರಣ ನಿಮಿತ್ತ ವಿದೇಶ ತೆರಳಿದ್ದ ಸಂದರ್ಭದಲ್ಲಿ ಪ್ರಭಾರ ಕುಲಪತಿಯಾಗಿ ಸೇವೆ ಸಲ್ಲಿಸಿದ ವಿಜ್ಞಾನ ನಿಕಾಯದ ಡೀನರಾದ ಪ್ರೊ.ಎಸ್.ವಿ. ಕೃಷ್ಣಮೂರ್ತಿರವರನ್ನು ಅಭಿನಂದಿಸಲಾಯಿತು.

ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾಲಯದ 34ನೇ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ:22–01–2025 ರಂದು ಏರ್ಪಡಿಸಿದೆ. ಕುಲಾಧಿಪತಿಗಳಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್‌ರವರು ಅಗ್ರಾಸನ ವಹಿಸಲಿದ್ದು, ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರೂ ಹಾಗೂ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳಾದ ಡಾ.ಎಂ.ಸಿ.ಸುಧಾಕರ್‌ರವರು ಉಪಸ್ಥಿತರಿರುವರು. ಹೈದರಾಬಾದ್ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಯವರಾದ ಪ್ರೊ.ರಾಮ್ ರಾಮಸ್ವಾಮಿರವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಕರ್ನಾಟಕ ಸರ್ಕಾರದ ಮಾಜಿ ಸಚಿವರು ಹಾಗೂ ವಿಧಾನ ಪರಿಷತ್‌ನ ಸಭಾಪತಿಗಳಾಗಿ ಕರ್ತವ್ಯ ನಿರ್ವಹಿಸಿರುವ ಶ್ರೀ ಕಾಗೋಡು ತಿಮ್ಮಪ್ಪ ಮತ್ತು ಅಂತರರಾಷ್ಟ್ರೀಯ ಖ್ಯಾತಿಯ ಯೋಗಪಟುವಾದ ಶ್ರೀ ಡಿ. ನಾಗರಾಜ ರವರಿಗೆ ಗೌರವ ಡಿ.ಲಿಟ್. ಪದವಿಯನ್ನು ಮತ್ತು ಖ್ಯಾತ ಭೌತವಿಜ್ಞಾನಿ ಪ್ರೊ.ಸಿ.ಎಸ್. ಉನ್ನಿಕೃಷ್ಣನ್ ಅವರಿಗೆ ಗೌರವ ಡಿ.ಎಸ್ಸಿ. ಪದವಿಯನ್ನು ಪ್ರದಾನ ಮಾಡಲಾಗುವುದು. ಘಟಿಕೋತ್ಸವದಲ್ಲಿ ಪಿ.ಹೆಚ್.ಡಿ. ಸ್ನಾತಕೋತ್ತರ ಮತ್ತು ಸ್ನಾತಕ ಪದವಿ ಪಡೆಯುವ ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದನೆಗಾಗಿ ವಿದ್ಯಾವಿಷಯಕ ಪರಿಷತ್‌ನ ಅಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು ಎಲ್ಲಾ ಸದಸ್ಯರುಗಳು ಸಭೆಯನ್ನು ಹಾಗೂ ಘಟಿಕೋತ್ಸವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿಕೊಡುವಂತೆ ಕೋರಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

**ಪರೀಕ್ಷಾ ವಿಭಾಗ**

**2025–ಎ.ಪ.–1.01** ವಿಶ್ವವಿದ್ಯಾಲಯದ 34ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಹಾಗೂ ಇತರೆ ಪದವಿಗಳಿಗೆ ಅರ್ಹರಾದ ವಿದ್ಯಾರ್ಥಿಗಳ/ಅಭ್ಯರ್ಥಿಗಳ ಪಟ್ಟಿ ಅನುಮೋದನೆ ಕುರಿತು.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡುತ್ತಾ, ವಿಶ್ವವಿದ್ಯಾಲಯದ 34ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ಕುಲಾಧಿಪತಿಗಳು ಅನುಮೋದನೆ ನೀಡಿದ್ದಾರೆ ಎಂಬ ಮಾಹಿತಿ ನೀಡುತ್ತಾ, ಘಟಿಕೋತ್ಸವದಲ್ಲಿ ಬಂಗಾರದ ಪದಕ, ನಗದು ಬಹುಮಾನ, ಪಿಹೆಚ್.ಡಿ., ಸ್ನಾತಕೋತ್ತರ ಮತ್ತು ಸ್ನಾತಕ ಮುಂತಾದ ಪದವಿಗಳನ್ನು ಪಡೆಯಲು ಅರ್ಹರಾದ ಅಭ್ಯರ್ಥಿಗಳ ಮಾಹಿತಿಯನ್ನು ಸಭೆಗೆ ವಿವರಿಸಿ, ಪಟ್ಟಿಗೆ ಅನುಮೋದನೆ ನೀಡುವಂತೆ ಕೋರಿದರು.

**ನಿರ್ಣಯ:** ಚರ್ಚೆಯ ನಂತರ 34ನೇ ವಾರ್ಷಿಕ ಘಟಿಕೋತ್ಸವದಲ್ಲಿ ಬಂಗಾರದ ಪದಕ, ನಗದು ಬಹುಮಾನ, ಪಿಹೆಚ್.ಡಿ., ಸ್ನಾತಕೋತ್ತರ ಮತ್ತು ಸ್ನಾತಕ ಮುಂತಾದ ಪದವಿಗಳನ್ನು ಪಡೆಯಲು ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಸಭೆಯು ಅನುಮೋದಿಸಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಸಹಿ/–
ಕುಲಪತಿಗಳು